# ಕರ್ನಾಟಕ ವಿಧಾನ ಪರಿಷತ್ತು

| | | | |
|---|---|---|---|
| 1 | ಸದಸ್ಯರ ಹೆಸರು | : | ಶ್ರೀ ತಿಪ್ಪಣ್ಣಪ್ಪ ಕಮಕನೂರು( ವಿ.ಸ ಯಿಂದ ಚುನಾಯಿತರಾದವರು) |
| 2 | ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ | : | 1536 |
| 3 | ಉತ್ತರಿಸಬೇಕಾದ ದಿನಾಂಕ | : | 21-03-2025 |

| ಕ್ರ ಸಂ | ಪ್ರಶ್ನೆ | ಉತ್ತರ |
|---|---|---|
| ಅ) | ಮಹಾತ್ಮಗಾಂಧಿ ಗ್ರಾಮೀಣ ಉದ್ಯೋಗ ಖಾತರಿ ಯೋಜನೆಯಡಿ (ನರೇಗಾ) ಕರ್ನಾಟಕದಲ್ಲಿ ಕೂಲಿ ಕಾರ್ಮಿಕರಿಗೆ ಕೇಂದ್ರ ಸರ್ಕಾರ ಬಾಕಿ ಉಳಿಸಿಕೊಂಡಿರುವ ಮೊತ್ತವೆಷ್ಟು; | ಮಹಾತ್ಮಗಾಂಧಿ ರಾಷ್ಟ್ರೀಯ ಗ್ರಾಮೀಣ ಉದ್ಯೋಗ ಖಾತರಿ ಯೋಜನೆಯು ಕೇಂದ್ರ ಪುರಸ್ಕೃತ ಯೋಜನೆಯಾಗಿದ್ದು, ಕೂಲಿ ಅನುದಾನಕ್ಕೆ ಸಂಬಂಧಿಸಿದಂತೆ 100% ರಷ್ಟು ಪರಿಪೂರ್ಣವಾಗಿ ಕೇಂದ್ರ ಸರ್ಕಾರವೇ ಭರಿಸುತ್ತಿದ್ದು, ಪ್ರಸ್ತುತ ಸಾಲಿನಲ್ಲಿ ರೂ. 4808.50 ಕೋಟಿಗಳಿಗೆ Mother Sanction ಆಗಿದ್ದು, ಅದರನ್ವಯ ಈಗಾಗಲೇ ರೂ. 3963.92 ಕೋಟಿ ಅನುದಾನವನ್ನು ನೇರವಾಗಿ ಫಲಾನುಭವಿಗಳಿಗೆ DBT ಮೂಲಕ ಜಮೆಯಾಗುತ್ತಿರುತ್ತದೆ. ಸದರಿ Mother Sanction ಅನ್ವಯ ರೂ. 844.58 ಕೋಟಿ ಅನುದಾನ ಬಿಡುಗಡೆಗೆ ಬಾಕಿ ಇರುತ್ತದೆ. |
| ಆ) | ಎಷ್ಟು ದಿನಗಳಿಂದ ಈ ಅನುದಾನ ಬಾಕಿ ಉಳಿದಿದೆ; ಸರ್ಕಾರ ಈ ಸಂಬಂಧ ಕೇಂದ್ರದೊಂದಿಗೆ ಪತ್ರ ವ್ಯವಹಾರ ನಡೆಸಿದೆಯೇ; | ಮಹಾತ್ಮಗಾಂಧಿ ರಾಷ್ಟ್ರೀಯ ಗ್ರಾಮೀಣ ಉದ್ಯೋಗ ಖಾತರಿ ಯೋಜನೆಯು ಮಾನವ ದಿನಗಳ ಸೃಜನೆ ಆಧಾರಿತ ಯೋಜನೆಯಾಗಿದ್ದು, ಕೇಂದ್ರ ಸರ್ಕಾರವು ಕೂಲಿ ಮೊತ್ತದ ಅನುದಾನವನ್ನು ಮಾನವ ದಿನಗಳ ಸೃಜನೆಯನ್ನು ಆಧರಿಸಿ ಕಾಲಕಾಲಕ್ಕೆ ನೇರವಾಗಿ ಫಲಾನುಭವಿಗಳಿಗೆ DBT ಮೂಲಕ ಜಮೆಯಾಗುತ್ತಿರುತ್ತದೆ. ಕೇಂದ್ರ ಸರ್ಕಾರದಿಂದ ಬಿಡುಗಡೆಯಾದ ಅನುದಾನವು ಶೇ. 75 ರಷ್ಟು ವೆಚ್ಚವಾದ ನಂತರ ರಾಜ್ಯ ಸರ್ಕಾರವು ಕೇಂದ್ರ ಸರ್ಕಾರಕ್ಕೆ ಹಣಬಳಕೆ ಪ್ರಮಾಣ ಪತ್ರವನ್ನು ಸಲ್ಲಿಸುತ್ತಿದ್ದು, ಅದರನ್ವಯ ಕೇಂದ್ರ ಸರ್ಕಾರವು ಅನುದಾನ ಬಿಡುಗಡೆಗೆ ಕ್ರಮವಹಿಸುತ್ತದೆ. ಕೇಂದ್ರ ಸರ್ಕಾರದಿಂದ ಕೂಲಿ ಮೊತ್ತ ಕೊನೆಯದಾಗಿ ದಿನಾಂಕ: 10.03.2025 ರಂದು ರೂ. 4.89 ಕೋಟಿ ಬಿಡುಗಡೆಯಾಗಿದ್ದು, ಕೂಲಿ ಮೊತ್ತದ ಪಾವತಿಗೆ ರೂ. 452.92 ಕೋಟಿ ಪಾವತಿಗೆ ಬಾಕಿ ಇರುತ್ತದೆ. ಅನುದಾನ ಬಿಡುಗಡೆಗೆ ರಾಜ್ಯ ಸರ್ಕಾರವು ನಿರಂತರವಾಗಿ ಕೇಂದ್ರ ಸರ್ಕಾರದೊಂದಿಗೆ ಪತ್ರ ವ್ಯವಹಾರ ಮತ್ತು ದೂರವಾಣಿ ಮುಖೇನ ಸಂಪರ್ಕದಲ್ಲಿದ್ದು, ಅನುದಾನ ಬಿಡುಗಡೆಗೆ ಕ್ರಮವಹಿಸಲಾಗುತ್ತದೆ. |
| ಇ) | ಅನುದಾನ ಬಿಡುಗಡೆಗೊಳಿಸುವಂತೆ ಕೇಂದ್ರದ ಮೇಲೆ ಒತ್ತಡ ತರಲಾಗುವುದೇ? | |

**ಸಂಖ್ಯೆ: ಗ್ರಾಅಪ/121(34)/ಉಖಾಯೋ/2025**

(ಪ್ರಿಯಾಂಕ್ ಖರ್ಗೆ)
ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್
ಹಾಗೂ ಮಾಹಿತಿ ತಂತ್ರಜ್ಞಾನ ಮತ್ತು ಜೈವಿಕ ತಂತ್ರಜ್ಞಾನ ಸಚಿವರು